<u>ಅಸಲು ದಾವಾ ಸಂಖ್ಯೆ: - **179/2022**</u> ಪಿ.ಡಬ್ಲ್ಯೂ:-1

ದಿನಾಂಕಃ **09.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತು. ಈ ದಾವೆಯನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದೇನೆ. ಈಶ್ವರ್ ನಾಯ್ಕ ನನಗೆ ಅಜ್ಜರಾಗಬೇಕು. ನಮ್ಮ ಅಜ್ಜನಿಗೆ ಒಟ್ಟು 5 ಜನ ಮಕ್ಕಳು ಅಂದರೆ ಗಳ್ಯಾನಾಯ್ಕ, ಗೇಮ್ಯಾನಾಯ್ಕ, ನಾಗಾನಾಯ್ಕ, ಸೂರ್ಯನಾಯ್ಕ ಮತ್ತು ನೀಲಿಬಾಯಿ. ಗಳ್ಯಾನಾಯ್ಕ, ಗೇಮ್ಯಾನಾಯ್ಕ, ನಾಗಾನಾಯ್ಕ, ಸೂರ್ಯನಾಯ್ಕ ಈಗ ತೀರಿಕೊಂಡಿರುತ್ತಾರೆ. ಗಳ್ಯಾನಾಯ್ಕನ ಹೆಂಡತಿಯ ಹೆಸರು ದರ್ಗಿಬಾಯಿ ಅವರಿಗೆ 4 ಜನ ಮಕ್ಕಳು ಅಂದರೆ ಶಿವರಾಜನಾಯ್ಕ, ಅಣ್ಣಪ್ಪನಾಯ್ಕ, ಚನ್ನನಾಯ್ಕ ಮತ್ತು ಮಲ್ಲಾನಾಯ್ಕ. ಗೇಮ್ಯಾನಾಯ್ಕ ಮದುವೆಯಾಗದೇ ತೀರಿಕೊಂಡಿರುತ್ತಾರ. ನಾಗಾನಾಯ್ಕನ ಹೆಂಡತಿಯ ಹೆಸರು ಸೇವ್ಲಿಬಾಯಿ ಅವರಿಗೆ 4 ಜನ ಮಕ್ಕಳು ಅಂದರೆ ಗೀತಾಬಾಯಿ, ಶೋಭಾ, ಪವನ್ ಕುಮಾರ್ ಮತ್ತು ಸುನೀಲ್ ಕುಮಾರ್. ಸೂರ್ಯನಾಯ್ಕನ ಹೆಂಡತಿಯ ಹೆಸರು ಸರೋಜಬಾಯಿ ಅವರಿಗೆ ಇಬ್ಬರು ಮಕ್ಕಳು ಅಂದರೆ ಮಂಜನಾಯ್ಕ ಮತ್ತು ಸುರೇಂದ್ರ ನಾಯ್ಕ. ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಏನು ಏನು ವ್ಯವಹಾರ ಆಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮತ್ತು ಅವರ ಸಹೋದರರ ನಡುವೆ ಒಟ್ಟು ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ಯಾವುದೇ ಭಾಗಾಂಶ ಆಗಿರುವುದಿಲ್ಲ. ನನ್ನ ತಂದೆ ಮತ್ತು ಅವರ ಸಹೋದರರು ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಸಹ ಮಾಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಗಳ್ಯಾನಾಯ್ಕರವರು ಅವರ

ಜೀವಿತ ಕಾಲದಲ್ಲಿ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ಹಿಸ್ಸಾ ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.